ಓ.ಎಸ್. ನಂ. 66/2009
ಪಿ ಡಬ್ಲ್ಯೂ -1

**<u>ಸಾಕ್ಷಿಯನ್ನು ದಿನಾಂಕ: 30.01.2025 ರಂದು ಕರೆಸಿ ಪ್ರಮಾಣೀಕರಿಸಲಾಯಿತು.</u>**
**<u>ಮುಂದುವರೆದ ಪಾಟೀಸವಾಲುಃ ಶ್ರೀ ಸಿ.ಎನ್.ಹೆಚ್. ವಕೀಲರಿಂದ</u>**

**1.** ನಿಪಿ-13 ರಿಂದ 15 ದಾಖಲೆಗಳು ಈ ದಾವೆ ಹೂಡುವುದಕ್ಕಿಂತ ಪೂರ್ವದಿಂದಲೂ ನನ್ನ ಬಳಿಯೇ ಇದ್ದವು. ನಿಪಿ-13 ರಿಂದ 15 ದಾಖಲೆಗಳನ್ನು ದಾವೆ ಹೂಡುವಾಗಲೇ ಹಾಜರು ಪಡಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸಾಕ್ಷಿಯು ಯಾವುದೇ ತೊಂದರೆ ಇರಲಿಲ್ಲ ಎಂದು ನುಡಿದಿದ್ದಾರೆ. ಯಾರು ಆಸ್ತಿಗಳನ್ನು ಖರೀದಿ ಮಾಡಿರುತ್ತಾರೋ ಅವರ ಬಳಿ ಮೂಲ ಕ್ರಯ ಪತ್ರ ಇರುತ್ತದೆ ಎಂದರೆ ಸರಿ. ನಿಪಿ-13 ರಲ್ಲಿ ನರಸಪ್ಪನವರ ಮಗ ನರಸೀಯಪ್ಪನವರು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ನಮ್ಮ ತಂದೆ ಅನಕ್ಷರಸ್ಥ. ಅವರು ಸಹಿ ಮಾತ್ರ ಮಾಡುತ್ತಿದ್ದರು. ನಮ್ಮ ತಂದೆ ನರಸಪ್ಪ ಹಾಗೂ ನರಸೀಯಪ್ಪ ಎಂದು ಎರಡು ರೀತಿಯಲ್ಲಿ ಸಹಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಈಗ ಸಾಕ್ಷಿಗೆ ತೋರಿಸಿದ ನಿಡಿ-39 ರಲ್ಲಿನ ಸಹಿ ನಿಮ್ಮ ತಂದೆಯ ಸಹಿ ಎಂದರೆ ಸಾಕ್ಷಿಯು ಅದು ನಮ್ಮ ತಂದೆಯ ಸಹಿ ಅಲ್ಲ ಎಂದು ನುಡಿದಿದ್ದಾರೆ. ನಿಪಿ-13 ಮತ್ತು ನಿಡಿ-39 ರಲ್ಲಿನ ಸಹಿಗಳು ನಮ್ಮ ತಂದೆಯ ಸಹಿಗಳಾಗಿರುತ್ತವೆ ಎಂದರೆ ಸಾಕ್ಷಿಯು ನಿಪಿ-13 ರಲ್ಲಿನ ಸಹಿ ಮಾತ್ರ ನಮ್ಮ ತಂದೆಯದ್ದಾಗಿರುತ್ತದೆ ಎಂದು ನುಡಿದಿದ್ದಾರೆ. ನಿಪಿ-13 ಮತ್ತು ನಿಡಿ-39 ರಲ್ಲಿನ ಸಹಿಗಳು ನಮ್ಮ ತಂದೆಯ ಸಹಿಗಳು ಎಂದು ಸಾಬೀತು ಪಡಿಸಲು ಬರವಣಿಗೆ ತಜ್ಞರ ಬಳಿ ಪರೀಕ್ಷೆಗಾಗಿ ಕಳುಹಿಸಲು ನನ್ನ ತೊಂದರೆ ಇರುವುದಿಲ್ಲ ಎಂದರೆ ಸಾಕ್ಷಿಯು ಕಳುಹಿಸಬಹುದು ಎಂದು ನುಡಿದಿದ್ದಾರೆ.

**2.** ಬೆಳಧರ ಗ್ರಾಮದಲ್ಲಿ ನಮಗೆ ಸೇರಿದ ಜಮೀನುಗಳು ಇದ್ದವು ಎಂದರೆ ಸರಿ. ನಮ್ಮ ತಂದೆಯವರು ಜೀವಂತ ಕಾಲದಲ್ಲಿ 2 ಜಮೀನುಗಳನ್ನು ಮಾರಾಟ ಮಾಡಿರುತ್ತಾರೆ. ಸದರಿ ಕ್ರಯ ಪತ್ರಗಳನ್ನು ಹಾಜರು ಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ನಿಪಿ-13 ರಿಂದ 15 ದಾಖಲೆಗಳು ಈ ದಾವೆಗೋಸ್ಕರ ಸೃಷ್ಟಿ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ಸಾಕ್ಷ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

**ಓ. ಹೇ.ಕೇ.ಸರಿ ಇದೆ.**

**ಸಹಿ/-**

**ಸಿ.ಜೆ ಮತ್ತು ಜೆಎಂ.ಎಫ್ ಸಿ**
**ಕೊರಟಗೆರೆ**